ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಗುರುವಾರ ದಿನಾಂಕ ೨೨ನೇ ಆಗಸ್ಟ್ ೧೯೮೫ ಶ್ರಾವಣ ೩೧ ೧೯೦೭. ಶಕ

ಸದನವು ವಿಧಾನಸೌಧದಲ್ಲಿರುವ, ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೯ ಗಂಟೆ ೧೫ ನಿಮಿಷಕ್ಕೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಬಿ.ಜಿ. ಬಣಕಾರ್) ಪೀಠವನ್ನಲಂಕರಿಸಿದರು.]

ಸಂತಾಪ ಸೂಚನೆ

ಮಾಜಿ ಶಾಸಕರಾದ ಶ್ರೀ ಗೋವಿಂದ ಪಿ. ಒಡೆಯರಾಜ್ ರವರ ನಿಧನದ ಬಗ್ಗೆ.

ಅಧ್ಯಕ್ಷರು.—ಮಾಜಿ ಶಾಸಕರಾದ ಶ್ರೀ ಗೋವಿಂದ ಪಿ, ಒಡೆಯರಾಜ್ ಅವರು ೨೧-೮-೮೫ ರಂದು ನಿಧನರಾದರೆಂದು ಈ ಸಭೆಗೆ ತಿಳಿಸಲು ವಿಷಾದಿಸುತ್ತೇನೆ. ಶ್ರೀಯುತರು ೬ ಮತ್ತು ೭ನೇ ವಿಧಾನ ಸಭೆಯ ಸದಸ್ಯರಾಗಿ ಕಮಲಾಪುರ ಕ್ಷೇತ್ರದಿಂದ ಆಯ್ಕೆಯಾಗಿ ಸೇವೆ ಸಲ್ಲಿಸಿದ್ದರು. ೧೯೭೦ ರಿಂದ ೧೯೭೬ರ ವರೆಗೆ ವಿಧಾನ ಪರಿಷತ್ತಿನ ಸದಸ್ಯರಾಗಿಯೂ ಸೇವೆ ಸಲ್ಲಿಸಿರುತ್ತಾರೆ. ಮೃತರ ಆತ್ಮಕ್ಕೆ ಶಾಂತಿಯನ್ನು ಕೋರುವ ಸಲುವಾಗಿ ಮಾನ್ಯ ಸದಸ್ಯರು ಎರಡು ನಿಮಿಷಗಳ ಕಾಲ ಎದ್ದುನಿಂತು ಮೌನವನ್ನಾಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಸಭೆಯಲ್ಲಿ ಸದಸ್ಯರೆಲ್ಲರೂ ಎದ್ದು ನಿಂತು ಎರಡು ನಿಮಿಷಗಳ ಕಾಲ ಮೌನವನ್ನಾಚರಿಸಿದರು)

ಈ ಸಭೆಯಲ್ಲಿ ಮಂಡಿಸಿದ ಸಂತಾಪ ಸೂಚನೆಯನ್ನು ಅಗಲಿದ ಸದಸ್ಯರ ಕುಟುಂಬದವರಿಗೆ ಕಳುಹಿಸಿಕೊಡಲಾಗುವುದು.

ವಿತ್ತೀಯ ಕಾರ್ಯಕಲಾಪಗಳು

1985-86ನೇ ಸಾಲಿನ ಬೇಡಿಕೆಗಳ ಕ್ರಮ ಸಂಖ್ಯೆ 5, 7 ಮತ್ತು 8ರ ಮೇಲೆ ನಡೆದ ಚರ್ಚೆಗೆ ಮಾನ್ಯ ಮಂತ್ರಿಗಳ ಉತ್ತರ.

ಶ್ರೀ ವೈ.ಕೆ. ರಾಮಯ್ಯ (ರೇಷ್ಮೆ ಇಲಾಖೆಯ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ನನ್ನ ಇಲಾಖೆಗೆ ಸಂಬಂಧಪಟ್ಟ ಬೇಡಿಕೆ ಮೇಲೆ ನಡೆದ ಚರ್ಚೆಗೆ ನಾನು ಉತ್ತರ ಕೊಡಲಿಕ್ಕೆ ಪ್ರಯತ್ನ ಮಾಡುತ್ತೇನೆ. ಈ ರೇಷ್ಮೆಯನ್ನು ಕೆಲವರು ಕೈಗಾರಿಕೆ ಎಂದು ಕರೆಯುತ್ತಾರೆ. ಮತ್ತೆಕೆಲವರು ವ್ಯವಸಾಯ ಎಂದು ಕರೆಯಂತಾರೆ. ನನ್ನ ದೃಷ್ಟಿಯಿಂದ ಇದು ವ್ಯವಸಾಯ, ಕೈಗಾರಿಕೆ ಜೊತೆಗೆ ಒಂದು ಕಲೆ ಎಂದು ಭಾವಿಸುತ್ತೇನೆ. ಏಕೆಂದರೆ, ಸೊಪ್ಪನ್ನು ಬೆಳೆದು, ಗೂಡನ್ನು ಮಾಡಿ, ನೂಲನ್ನು ತೆಗೆದು, ಬಟ್ಟೆ ನೇಯುವವರೆಗೆ ಎಲ್ಲಾ ಹಂತದಲ್ಲೂ ಈ ಉದ್ಯಮ ಒಂದು ಕಲೆ. ಸೊಪ್ಪನ್ನು ಕೊಯ್ಯುವುದಾಗಲೀ, ಗೂಡನ್ನು ಸಾಕಂವುದಾಗಲೀ, ದಾರವನ್ನು ತೆಗೆಯುವುದಾಗಲೀ, ಸೀರೆಯನ್ನು ನೇಯುವುದಾಗಲೀ, ಈ ಎಲ್ಲಾ ಹಂತಗಳಲ್ಲೂ ಇದು ಒಂದು ಕಲೆ. ಈ ಉದ್ಯಮಕ್ಕೆ ಪ್ರಧಾನವಾಗಿ ಬೇಕಾದ ಅಪಶ್ಯಕತೆ ನನ್ನ ದೃಷ್ಟಿಯಿಂದ ಎರಡು. ಭಾರತ ದೇಶದಲ್ಲಿ ಉತ್ಪಾದನೆ ಆಗುವ ಒಟ್ಟಾರೆ ರೇಷ್ಮೆಯಲ್ಲಿ ೧೦೦ಕ್ಕೆ ೬೩ರಷ್ಟು ಭಾಗವನ್ನು ಕರ್ನಾಟಕ ರಾಜ್ಯದಲ್ಲಿಯೇ ಉತ್ಪಾದನೆ